ಶ್ರೀ ಎ. ಶ್ರೀನಿವಾಸ ಪ್ರಸಾದ್ : ಸದ್ಯಕ್ಕೆ ಪರಿಹಾರದ ಪ್ರಶ್ನೆಯಿಲ್ಲ. ಸದ್ಯಕ್ಕೆ ಅಲ್ಲಿ ಜನರು ಏನು ಕಷ್ಟದಲ್ಲಿದ್ದಾರೆ, ಅದನ್ನು ಬಗೆಹರಿಸಲು, ಅವರಿಗೆ ಸಮಾಧನ ಮಾಡಲು ನೋಡಬೇಕು.

ಶ್ರೀ ಕೆ.ಜಿ. ಬೋಪಯ್ಯ: ಈಗ ನೀವು ಅಸೆಸ್‌ಮೆಂಟ್‌ಗೆ ಹೋದರೆ, ಅಲ್ಲಿ ಈಗ ಕಾಫಿಯೆಲ್ಲ ಮಣ್ಣೊಳಗೆ ಹೋಗಿ ಆಗಿದೆ, ಅಲ್ಲಿ ಏನೂ ಕಾಣುವುದಿಲ್ಲ. ಅದನ್ನು ನೀವು ಮಾಡಬೇಕಲ್ಲವೇ? ಏನೂ ಮಾಡದೆ ಈ ರೀತಿ ಉತ್ತರ ಹೇಳುವುದು ಸರಿಯಲ್ಲ. ಅವರ ತೊಂದರೆಗೆ ಸ್ಪಂದಿಸುವುದು ಬೇರೆ. ಕಾಫಿ ಬೆಳೆಗೆ ಪರಿಹಾರವನ್ನು ಕೊಡುತ್ತೇವೆ ಎನ್ನುವ ಬಗ್ಗೆ ಸ್ಪಷ್ಟವಾದ ನಿರ್ದೇಶನ ಕೊಡಿ.

ಅಧ್ಯಕ್ಷರು: ಹೀಗೇ ಹೇಳಿ ಎಂದು ಹೇಳುವುದಕ್ಕೆ ಬರುವುದಿಲ್ಲ. ಅವರು ಏನು ಹೇಳುತ್ತಾರೋ ಹೇಳಲು ಬಿಡಿ.

ಶ್ರೀ ಕೆ.ಜಿ. ಬೋಪಯ್ಯ: ಸ್ಪಷ್ಟವಾದ ನಿರ್ದೇಶನ ಕೊಡಿ ಕೊಡುತ್ತೇನೆಂದು ಹೇಳಿ.

3) **ವಿಷಯ:** ಮಂಡ್ಯ MUDA ಬಗ್ಗೆ

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಮೇಲುಕೋಟೆ): ಮಾನ್ಯ ಅಧ್ಯಕ್ಷರೆ, ಎಲ್ಲರಿಗೂ ಗೊತ್ತಿರುವಂತೆ ಮಂಡ್ಯದಲ್ಲಿ 2009ರಲ್ಲಿ MUDA ಆಡಳಿತ ಮಂಡಳಿಯವರು ಒಂದು sq. feet ಗೆ ಎರಡು ಸಾವಿರ, ಎರಡೂವರೆ ಸಾವಿರ ರೂಪಾಯಿಗಳಂತೆ ಭೂಮಿಯನ್ನು ಕೊಳ್ಳುತ್ತೇವೆಂದರು. ಸುಮಾರು 23 ಸಾವಿರ ಜನ application ಹಾಕಿದ್ದರು. ಮನಸೋ ಇಚ್ಛೆ ಸುಮಾರು 107 ನಿವೇಶಗಳನ್ನು ರಾಜಕಾರಣಿಗಳು, ಇನ್ನಿತರೆ ಸ್ವ ಇಚ್ಛೆ ಇರುವವರು ತಾವು ತಾವೇ ಹಂಚಿಕೊಂಡು ದೊಡ್ಡ ಹಗರಣವಾಗಿದೆ. ಹಿಂದೆ ಇದ್ದ ಸರ್ಕಾರ ಒಂದು ಸಮಿತಿ ರಚಿಸಿ ಅದರಿಂದ ಸಂಪೂರ್ಣ ವಿವರಣೆ ಪಡೆದಿತ್ತು. ನ್ಯಾಯಾಲಯದಲ್ಲೂ ಆ ಮೊಕದ್ದಮೆ ಇರುವುದರಿಂದ ಸರ್ಕಾರ ತಕ್ಷಣ ಆ 107 ನಿವೇಶಗಳನ್ನು ವಜಾ ಮಾಡಿ ನಿಜವಾಗಿ ಯಾರಿಗೆ serial number ಪ್ರಕಾರ ನಿವೇಶನ ಕೊಡಬೇಕೋ ಅವರಿಗೆ ಕೊಡಬೇಕು.

ಅಧ್ಯಕ್ಷರು: ಮುಂದೆ ಏನು ಮಾಡಬೇಕು ಹೇಳಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಆದ್ದರಿಂದ, ದಯವಿಟ್ಟು ಇದಕ್ಕೆ ಸಮಂಜಸವಾದ ಉತ್ತರ ಕೊಡಬೇಕು.

ಶ್ರೀ ವಿನಯಕುಮಾರ್ ಸೊರಕೆ : (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರು ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ 107 ನಿವೇಶನ ಹಂಚಿಕೆ ಮಾಡಿರುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಆ ಹಗರಣದ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯ, ಜಿಲ್ಲಾ ನ್ಯಾಯಾಲಯ ಮತ್ತು ಲೋಕಾಯುಕ್ತದಲ್ಲಿ ಪ್ರಕರಣಗಳು ದಾಖಲಾಗಿವೆ. ಇವು ವಿವಿಧ ಹಂತಗಳಲ್ಲಿ ಇತ್ಯರ್ಥಕ್ಕೆ ಬಾಕಿ ಇರುತ್ತದೆ. ನಿವೃತ್ತ ಆಯುಕ್ತರಾದ ಶ್ರೀ ಡಿ. ಉಪೇಂದ್ರ ನಾಯಕ್ ಅವರ ವಿರುದ್ಧ ಇಲಾಖಾ ವಿಚಾರಣೆಯೂ ಸಹ ನಿವೃತ್ತ ನ್ಯಾಯಾಧೀಶರಿಂದ ತನಿಖಾ ಹಂತ ಬಾಕಿ ಇರುತ್ತದೆ. ಈಗಾಗಲೇ ಮೊನ್ನೆ ವಿರೋಧ ಪಕ್ಷದ ನಾಯಕರು, ಚಲುವರಾಯಸ್ವಾಮಿಯವರು ಅಲ್ಲಿಯ ಹಗರಣದ ಬಗ್ಗೆ ಕೂಡ ಅಲ್ಲಿ ಆಗಿರುವಂಥ ಹಣದ ಬಗ್ಗೆ .....

ಅಧ್ಯಕ್ಷರು: ಹಣದ ಬಗ್ಗೆ ಬೇಡ.

ಶ್ರೀ ವಿನಯಕುಮಾರ್ ಸೊರಕೆ: ಅವರು ಪ್ರಸ್ತಾಪ ಮಾಡಿದ ಸಂದರ್ಭದಲ್ಲಿ ಈಗಾಗಲೇ ನಮ್ಮ ಇಲಾಖೆಯಿಂದ ಮಾನ್ಯ ಗೃಹ ಸಚಿವರಿಗೆ ಪತ್ರ ಬರೆದಿದ್ದೇವೆ. 107 ನಿವೇಶನಗಳ ಹಗರಣವನ್ನೂ ಕೂಡ ನಾವು ಇದರ ಜೊತೆಯಲ್ಲಿ ತನಿಖೆ ಮಾಡಬೇಕೆಂದು ಪತ್ರ ಬರೆದಿದ್ದೇವೆ. ಈ ಅಧಿವೇಶನ ಮುದಿದ ಕೂಡಲೇ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಭೇಟಿ ಕೊಡುತ್ತೇನೆ. CID ತನಿಖೆ ನಡೆಸಬೇಕೆನ್ನುವ ರೀತಿಯಲ್ಲಿ ನಾವು ಪತ್ರ ಬರೆದಿದ್ದೇವೆ. 2 ಕೋಟಿ ರೂಪಾಯಿ ಮೀರಿದ ಹಗರಣವಾದ ಕಾರಣ CBI ಕೂಡ involve ಆಗುವ ಅವಕಾಶಗಳಿರುತ್ತವೆ. ಆ ದೃಷ್ಟಿಯಲ್ಲಿ ಆ ತನಿಖೆ ಜೊತೆ ಇದನ್ನೂ ಕೂಡ ಸೇರಿಸಬೇಕೆನ್ನುವ ರೀತಿಯಲ್ಲಿ ಕೇಳಿಕೊಂಡಿದ್ದೇವೆ. ಅದರ ನಂತರ ತಕ್ಷಣ ಪ್ರಾಧಿಕಾರಕೆ ಭೇಟಿ ಕೊಟ್ಟು ಪರಿಶೀಲನೆ ಮಾಡಿಕೊಂಡು ತೀರ್ಮಾನ ಕೈಗೊಳ್ಳುತ್ತೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : 4–5 ವರ್ಷಗಳಾಯಿತು. ಇನ್ನೂ CID, CBI ಎಂದು ಹೇಳುತ್ತಿದ್ದೀರಲ್ಲ.

ಅಧ್ಯಕ್ಷರು: ಮಾನ್ಯ ಮುಖ್ಯ ಮಂತ್ರಿಯವರೆ, ಮಾನ್ಯ ಸದಸ್ಯರು, ಹಂಚಿರುವ ನಿವೇಶನಗಳು ಕಾನೂನಿಗೆ ವಿರುದ್ಧವಾಗಿವೆ, ಅದನ್ನು ರದ್ದುಪಡಿಸಿ ಎಂದು ಕೇಳುತ್ತಿದ್ದಾರೆ. ಆಗುತ್ತದೋ, ಇಲ್ಲವೋ ಹೇಳಿ.

ಶ್ರೀ ವಿನಯಕುಮಾರ್ ಸೊರಕೆ : ಈಗಾಗಲೇ ಆ ಪ್ರಕರಣ ನ್ಯಾಯಾಲಯದಲ್ಲಿದೆ. ಅದು ತೀರ್ಮಾನವಾದ ಕೂಡಲೇ ನಾವು ಅದನ್ನು ರದ್ದುಪಡಿಸುವ ಕೆಲಸಕಾರ್ಯಗಳನ್ನು ಮಾಡುತ್ತೇವೆ.

4) ವಿಷಯ: RTE ಬಗ್ಗೆ.

ಶ್ರೀ ಸಿ.ಟಿ. ರವಿ: (ಚಿಕ್ಕಮಗಳೂರು): ಮಾನ್ಯ ಅಧ್ಯಕ್ಷರೆ, RTE quota ಅಡಿ ಕೇಂದ್ರ ಸರ್ಕಾರ 2009–10ರಲ್ಲಿ 25% ಸೀಟುಗಳನ್ನು ಖಾಸಗಿ ಶಾಲೆಗಳಲ್ಲೂ ಕೂಡ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಅವಕಾಶ ಮಾಡಿಕೊಡುವ ಯೋಜನೆ ಜಾರಿಗೆ ತಂದಿತು. ಅದನ್ನು ಅನುಷ್ಠಾನಗೊಳಿಸಿದ ಮೊದಲ ರಾಜ್ಯ ಕರ್ನಾಟಕ. ಆದರೆ, ಅದರ ದುರುಪಯೋಗವಾಗುತ್ತಿದೆ. ಸುಳ್ಳು certificate ಗಳನ್ನು ಕೊಟ್ಟು ದುರುಪಯೋಗವಾಗುತ್ತಿದೆ.

ಅಧ್ಯಕ್ಷರು: ದುರುಪಯೋಗವಾಗುವುದನ್ನು ತಡೆಯುವುದು ಹೇಗೆ ಎಂದು ಹೇಳಿ.

ಶ್ರೀ ಸಿ.ಟಿ. ರವಿ: ಅದನ್ನು ತಡೆದು ರದ್ದುಪಡಿಸಿ ನಿಜವಾದ ಅರ್ಹರಿಗೆ ಕೊಡುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತದೆಯೇ?

ಶ್ರೀ ಟಿ.ಬಿ. ಜಯಚಂದ್ರ: (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು RTE quota ದ ಅಡಿ ಮೀಸಲಾತಿ ಕುರಿತು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆದಿದ್ದಾರೆ. ಸರ್ಕಾರಕ್ಕೂ ಕೂಡ ಅದರ ಅರಿವಿದೆ. ಅದರ ಬಗ್ಗೆ ಸುದೀರ್ಘವಾದ ಉತ್ತರವನ್ನು ನಾಳೆ ಕೊಡಿಸುತ್ತೇವೆ. ಏಕೆಂದರೆ, ಮಾನ್ಯ ಸಚಿವರು Council ನಲ್ಲಿದ್ದಾರೆ.

5) **ವಿಷಯ:** 1987ನೇ ಇಸವಿಯಿಂದ 1994–95ನೇ ಸಾಲಿನ ಅನುದಾನರಹಿತ ಶಾಲಾ ಕಾಲೇಜುಗಳಿಗೆ ಅನುದಾನ ನೀಡುವ ಬಗ್ಗೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: (ವಿರೋಧ ಪಕ್ಷದ ನಾಯಕರು): 1987ನೇ ಇಸವಿಯಿಂದ 1994–95ನೇ ಸಾಲಿನ ಅನುದಾನರಹಿತ ಶಾಲಾ ಕಾಲೇಜುಗಳಿಗೆ ಸರ್ಕಾರದ ಅನುದಾನವಿದ್ದರೂ ಮುಂದೆ ಬಂದ ಸರ್ಕಾರಗಳು ಇದರಲ್ಲಿ ಕೇವಲ 718 ಶಾಲಾ ಕಾಲೇಜುಗಳಿಗೆ ಮಾತ್ರ ಅನುದಾನ ಕೊಟ್ಟು 203 ಶಾಲಾ ಕಾಲೇಜುಗಳಿಗೆ ಅನುದಾನ ಕೊಟ್ಟಿಲ್ಲ. ಅದರ ಬಗ್ಗೆ ಪಾದಯಾತ್ರೆ ಮಾಡಿ ಸರ್ಕಾರದ ಗಮನ ಸೆಳೆದರು. ಅದರ ಕಡತ